# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ ರವರ ನ್ಯಾಯಾಲಯ, ಕೊಳ್ಳೇಗಾಲ

## ಸಿ.ಸಿ ನಂ. 818/2022

ಚಾಸಾ 14 ಫ್ರಾಸಾ 7

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ ವೀರಣ್ಣಾರಾಧ್ಯ |
| ತಂದೆಯ ಹೆಸರು | : | ಲೇಟ್. ಅಮೃತಾರಾಧ್ಯ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಪಿ ಎಸ್ ಐ |
| ವಾಸ ಸ್ಥಳ | : | ಕೊಳ್ಳೇಗಾಲ |

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾದ ದಿನಾಂಕ 28.11.2025

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ದಿನಾಂಕಃ 17.03.2021 ರಿಂದ ದಿನಾಂಕಃ 28.01.2023 ರವರಗೆ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ .ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 07.09.2021 ರಂದು ರಾತ್ರಿ 12.30 ಗಂಟೆ ಸಮಯದಲ್ಲಿ ಚಾಸಾ 1ರವರು ಠಾಣೆಗೆ ಹಾಜರಾಗಿ ಹಾಜರು ಪಡಿಸಿದ ಅರೋಪಿ, ಮಾಲುಗಳನ್ನು, ವರದಿಯನ್ನು ಸ್ವೀಕರಿಸಿ ಈ ಪ್ರಕರಣ ದಾಖಲು ಮಾಡಿರುತ್ತೇನೆ. ಸಾಕ್ಷಿಯು ನಿಪಿ-3 ರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-3 (ಬಿ)ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿ, ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗೆ ನಿವೇದಿಸಿರುತ್ತೇನೆ. ಪ್ರಥಮ ವರ್ತಮಾನ ವರದಿಯನ್ನು ನಿಪಿ-8 ಎಂದು ಗುರುತಿಸಲಾಯಿತು. ಮಾಲುಗಳನ್ನು ಸ್ವತ್ತಿನ ಪಟ್ಟಿಯಲ್ಲಿ ನಮೂದು ಮಾಡಿರುತ್ತೇನೆ. ಆರೋಪಿಯ ಸ್ವ ಇಚ್ಛಾ ಹೇಳಿಕೆ ಪಡೆದು, ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿದೆ. ದಿನಾಂಕಃ 07.09.2021ರಂದು ಚಾಸಾ 2 ಮತ್ತು ಚಾಸಾ 3ರವರ ಹೇಳಿಕೆ, ದಿನಾಂಕಃ 08.09.2021ರಂದು ಚಾಸಾ 4 ರಿಂದ ಚಾಸಾ 8ರವರ ಹೇಳಿಕೆ, ದಿನಾಂಕಃ 12.09.2021 ರಂದು ಚಾಸಾ 9 ಮತ್ತು ಚಾಸಾ 10 ರವರ ಪಡೆದಿರುತ್ತೇನೆ. ಫೋಟೋ ತೆಗೆದ ಸಂಬಂಧ ದಿನಾಂಕಃ 12.09.2021 ರಂದು ಚಾಸಾ 8 ರವರಿಂದ 65ಬಿ ದೃಡೀಕರಣ ಪತ್ರ ಪಡೆದಿದ್ದನು. ಸಾಕ್ಷಿಯು 65 ಬಿ ದೃಡೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ದಿನಾಂಕಃ 14.09.2021 ರಂದು ಮುದ್ದೇಮಾಲು 1ರಿಂದ 6 ನ್ನು ಚಾಸಾ 11 ರವರ ಮೂಲಕ ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿರುತ್ತೇನೆ. ದಿನಾಂಕಃ 29.10.2021 ರಂದು ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಪಡದಿದ್ದೆ. ಸದರಿ ವರದಿಯನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ದಿನಾಂಕಃ 15.12.2021 ರಂದು ಆರೋಪಿಗೆ ಬಂದೂಕು ಹೊಂದಲು ಪರವಾನಿಗೆ ಪಡದಿದ್ದಾನೋ ಇಲ್ಲವೋ ಎಂಬ ಬಗ್ಗೆ ಚಾಮರಾಜನಗರ ಜಿಲ್ಲೆ, ಜಿಲ್ಲಾಧಿಕಾರಿಗಳ ಕಛೇರಿಯಿಂದ ವರದಿ ಪಡೆದು, ಆರೋಪಿಯ ವಿರುದ್ಧ ಈ ಪ್ರಕರಣದಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ಚಾಮರಾಜನಗರ ಜಿಲ್ಲೆ, ಜಿಲ್ಲಾಧಿಕಾರಿಗಳು ನೀಡಿದ ಅಧಿಕೃತ ಜ್ಞಾಪನಾ ಹಾಗೂ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ಒಟ್ಟಾಗಿ ನಿಪಿ–11 ಎಂದು ಸಾಕ್ಷಿಯ ಸಹಿಯನ್ನು ನಿಪಿ–11(ಎ) ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದ ಮುಂದೆ ಆರೋಪಿ ಗೈರು ಹಾಜರಾಗಿದ್ದು ಆರೋಪಿ ಪರ ವಕೀಲರು ವಿನಾಯತಿ ಅರ್ಜಿ ಸಲ್ಲಿಸಿ ಆರೋಪಿಯ ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಮುದ್ದೇಮಾಲು 1 ರಿಂದ 8 ನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಂ ಎಸ್ ಕೆ ವಕೀಲರಿಂದ</u>

ಚಾಸಾ 1ರವರು ಆ ದಿನ ನನಗೆ ವರದಿ, ಮಹಜರ್ ಹಾಗೂ ಪಂಚರಿಗೆ ಕೊಟ್ಟ ನೋಟೀಸ್ ಗಳನ್ನೂ ಕೊಟ್ಟಿದ್ದರು ಎಂದರೆ ಸರಿ. ಪಂಚರಿಗೆ ಕೊಟ್ಟ ನೋಟೀಸ್ ನಲ್ಲಿ ದಿನಾಂಕಃ 04.02.2022 ಎಂದು ಸಹಿ ಮಾಡಿರುತ್ತಾರೆ. ನೋಟಿಸ್, ವರದಿ ಮತ್ತು ಮಹಜರ್ ಗೆ ತಾಳೆಯಾಗುವುದಿಲ್ಲ ಎಂದರೆ ಸರಿ. ಚಾಸಾ 8ರವರು ನಿಪಿ–4 ರಿಂದ ನಿಪಿ–7 ನ್ನು ಎಲ್ಲಿ ಪ್ರಿಂಟ್ ತೆಗೆಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. 65 ಬಿ ದೃಡೀಕರಣದಲ್ಲಿ ಆ ಬಗ್ಗೆ ಮಾಹಿತಿ ಪಡೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ಆ ದಿನ ನನ್ನ ಸಮಕ್ಷಮ ಹಾಜರು ಪಡಿಸಲಾದ ಮುದ್ದೇಮಾಲುಗಳ ಮೇಲೆ ನಿಖರವಾಗಿ ಸಮಯ ಮತ್ತು ದಿನಾಂಕ ಬರೆದಿರುವುದಿಲ್ಲ. ನ್ಯಾಯಾಲಯದ ಸಮಕ್ಷಮ ಇರುವ ಬ್ಯಾಗ್ ಬಟ್ಟೆ ಬ್ಯಾಗ್ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1ರವರ ಮಾತು ಕೇಳಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮುದ್ದೇಮಾಲುಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಹೇಳಿಕೇಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ. ಎಂ )
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಕೊಳ್ಳೇಗಾಲ